ಮಾನ್ಯ (ಶ್ರೀ ಕೆ. ಚೆಂಗಲರಾಯರೆಡ್ಡಿಯವರು.)

ದಿಲ್ಲ. ಅದನ್ನು ಪರಿಶೀಲಿಸುತ್ತೇವೆ. ಫೆಬ್ರುವರಿ ತಿಂಗಳಲ್ಲಿ ತುಮಕೂರಿಗೆ ಬರುವ ಸಂಭವವಿದೆ. ಆಗ ಎಲ್ಲವನ್ನೂ ಸಹ ಪರಿಶೀಲನೆ ಮಾಡಲಾಗುತ್ತದೆ.

Opening of New type and Pucca Middle Schools in the State from 1944 to 1950.

*Q.—166. **Sri B. CHENNABYRE GOWDA** (Bangalore District-General).—

Will the Government be pleased to state :—

(a) the number of Middle Schools (new type and pucca) that were opened in the State from 1st January 1944 to 31st December 1950 ;

(b) how many of them have been opened from 1st January 1950 to December 1950 ;

(c) if the number is comparatively small during the year 1950, the reasons for such a fall ?

A.—**The Hon'ble Sri K. CHENGALARAYA REDDY** (Chief Minister).—

(a)

Year		*Pucca Middle Schools.*	*New Type Middle Schools*
		No. of Schools opened.	*No. of Schools opened*
1943-44	...	30	150
1944-45	...	36	115
1945-46	...	34	50
1946-47	...	48	50
1947-48	...	70	50
1948-49	...	42	67
1949-50	...	1	50
1950-51	...	1	50
Total till the end of December 1950.		262	582

(b) Only one aided school taken over to Government.....50.

(c) The number of New type middle schools sanctioned during the year 1950 (1950-51) is not less than that in the previous year.

ಶ್ರೀ ಬಿ. ಚೆನ್ನಬೈರೇಗೌಡರು.—1949-50 ಮತ್ತು 1950-51ರಲ್ಲಿ ಪಕ್ಕಾ ಮಿಡ್ಲ್ ಸ್ಕೂಲುಗಳನ್ನು ವರ್ಷಕ್ಕೆ ಒಂದೊಂದರಂತೆ ಕೊಟ್ಟಿದ್ದೀರಿ; ಇದು ಸಾಕೆ?

*The Hon'ble Sri K. CHENGALARAYA REDDY.—I want to give certain further information to the Hon'ble Member, Sir, in addition to what has been furnished in the printed answer. According to a new policy adopted with effect from 1949-50, only new type middle schools were opened in all deserving places. The gradual conversion of the deserving new type middle schools into pucca middle schools by sanctioning as a first step the II and III and IV teachers to such schools according as they have a strength of 80 or 100 respectively is being followed.

conversion of the deserving new type middle schools into pucca middle schools by sanctioning as a first step the II and III and IV teachers to such schools according as they have a strength of 80 or 100 respectively.

ಹೀಗೆ ಒಂದು ಹೊಸ ನೀತಿಯನ್ನನುಸರಿಸಿದ್ದರಿಂದ ಸಂಖ್ಯೆ ಕಡಿಮೆಯಾಗಿ ಕಾಣುತ್ತದೆಯೇ ಹೊರತು ಹೊಸದಾಗಿ ಹೆಚ್ಚು ಸಂಖ್ಯೆಯಲ್ಲಿ ಪ್ರಾರಂಭ ಮಾಡಿಲ್ಲವೆಂದು ಹೇಳುವುದನ್ನು ಒಪ್ಪಿಕೊಳ್ಳುವುದಕ್ಕಾಗುವುದಿಲ್ಲ. ಪ್ರಶ್ನೆಯ (ಸಿ) ಭಾಗದಲ್ಲಿ if the number is comparatively small during the year 1950, the reasons for such a fall ಎಂದು ಕೇಳಿರುವುದಕ್ಕೆ it is not less than that in the previous year ಎಂದು ಉತ್ತರ ಕೊಟ್ಟಿದೆ. ಪಕ್ಕಾ ಮಿಡ್ಲ್ ಸ್ಕೂಲುಗಳು ಎರಡಾದರೂ ನ್ಯೂಟೈಪ್ ಮಿಡ್ಲ್ ಸ್ಕೂಲುಗಳು 50 ನ್ನು ತೆರೆಯಲಾಗಿದೆ. ಈ ಸಂಖ್ಯೆಯನ್ನೂ ಉತ್ತರದಲ್ಲಿ ಕೊಟ್ಟಿದೆ.

ಶ್ರೀ ಬಿ. ಚನ್ನಬೈರೇಗೌಡರು.—ಎರಡನ್ನೂ ಸೇರಿಸಿದರೂ ವರ್ಷಕ್ಕೆ ಒಂದೊಂದರಂತೆ ಆಗುತ್ತದೆ, ದೇಶದಲ್ಲಿ ಅವಶ್ಯಕತೆ ಇದ್ದುದು ಒಂದೊಂದೇ ಪಕ್ಕಾ ಮಿಡ್ಲ್ ಸ್ಕೂಲೇ?

ಮಾನ್ಯ ಶ್ರೀ ಕೆ. ಚೆಂಗಲರಾಯರೆಡ್ಡಿಯವರು.—ಹೋದ ವರ್ಷದಿಂದ ಸರ್ಕಾರದ ನೀತಿ ಸ್ಕೂಲುಗಳ ಸಂಖ್ಯೆಯನ್ನೇ ಜಾಸ್ತಿ ಮಾಡುವುದನ್ನು ನಿಲ್ಲಿಸಬೇಕೆಂಬುದು. ಈಗಾಗಲೇ ಎಲ್ಲೆಲ್ಲ ಪಕ್ಕಾ ಮಿಡ್ಲ್ ಸ್ಕೂಲುಗಳನ್ನೂ ಹೈಸ್ಕೂಲುಗಳನ್ನೂ ಕಾಲೇಜುಗಳನ್ನೂ ಜಾಸ್ತಿ ಮಾಡಿದೆಯೋ ಅಲ್ಲಿ ಈಗ ಒಂದೆರಡು ವರ್ಷಗಳಿಂದ ಕಟ್ಟಡಗಳಿಗೂ equipment ಗೂ ತೊಂದರೆಯಾಗಿ ಅಕ್ಷೇಪಣೆಗಳು ಬಂದವು. ಅದುದರಿಂದ ಈಗಾಗಲೇ ಪ್ರಾರಂಭ ಮಾಡಿರುವ ಸ್ಕೂಲುಗಳನ್ನು ಉತ್ತಮ ಸ್ಥಿತಿಗೆ ತಂದು, ಅವುಗಳಿಗೆ ಅವಶ್ಯಕವಾದ ಎಲ್ಲ ಸಲಕರಣೆಗಳನ್ನೂ ಕೊಟ್ಟು, ಈಗಿನ ಹಣಕಾಸಿನ ಸ್ಥಿತಿಯನ್ನು ಗಮನಿಸಿ ತಕ್ಕ ಪ್ರಮಾಣದಲ್ಲಿ ಎಷ್ಟು ಸಾಧ್ಯವೋ ಅಷ್ಟು ಮಾಡಿ ಹೆಚ್ಚು ಹೋಗಬಾರದೆಂದು ಸರ್ಕಾರದವರು ಹೊಸದಾಗಿ ತೆರೆಯುವುದನ್ನು ತಾತ್ಕಾಲಿಕವಾಗಿ ನಿಲ್ಲಿಸಿದ್ದಾರೆ. ಅದರಿಂದ ಸಂಖ್ಯೆ ಕಡಿಮೆ ಕಾಣುತ್ತದೆ, ಅಷ್ಟೆ.

ಶ್ರೀ ಬಿ. ಚೆನ್ನಬೈರೇಗೌಡರು.—ವಿದ್ಯಾಭ್ಯಾಸಕ್ಕಾಗಿ ವರ್ಷಕ್ಕೆ ಮೂರು ಕೋಟಿ ರೂಪಾಯಿ ಖರ್ಚಾಗುತ್ತಿದೆ ಎಂಬುದನ್ನು ಒಪ್ಪುತ್ತೀರಾ?

ಮಾನ್ಯ ಶ್ರೀ ಕೆ. ಚೆಂಗಲರಾಯರೆಡ್ಡಿಯವರು.—ಅದು ಬಡ್ಜೆಟ್ಟಿನಲ್ಲೇ ಇದೆ, ನೋಡಬಹುದು.

ಶ್ರೀ ಬಿ. ಚನ್ನಬೈರೇಗೌಡರು.—ಇಷ್ಟು ಹಣ ಖರ್ಚಾಗುತ್ತಿದ್ದರೂ ವರ್ಷಕ್ಕೆ ಒಂದೇ ಸ್ಕೂಲನಂತೆ ಮಾಡಿದರೆ ಸಾಕೆ ?

ಮಾನ್ಯ ಶ್ರೀ ಕೆ. ಚೆಂಗಲರಾಯರೆಡ್ಡಿಯವರು.—ವಿಶ್ವವಿದ್ಯಾನಿಲಯಕ್ಕೆ ಸೇರಿದ ಕಾಲೇಜುಗಳು, ಚಿಕ್ಕ ಕರ್ ಕಾಲೇಜುಗಳು, ಸಾವಿರಾರು ಪ್ರೈಮರಿ ಮತ್ತು ಮಿಡ್ಲ್ ಸ್ಕೂಲುಗಳು, ನೂರಾರು ಹೈಸ್ಕೂಲುಗಳು ಇವಕ್ಕೆಲ್ಲ ಹಣ ಖರ್ಚಾಗಿದೆ.

ಶ್ರೀ ಬಿ. ಚನ್ನಬೈರೇಗೌಡರು.—ಸರ್ಕಾರದವರು ಪ್ರಾಥಮಿಕ ವಿದ್ಯಾಭ್ಯಾಸಕ್ಕೆ ಹೆಚ್ಚು ಗಮನ ಕೊಡುತ್ತಿಲ್ಲವೆಂದು ಒಪ್ಪಿಕೊಳ್ಳುತ್ತಿರಾ ?

ಮಾನ್ಯ ಶ್ರೀ ಕೆ. ಚೆಂಗಲರಾಯರೆಡ್ಡಿಯವರು.—ಒಪ್ಪಿಕೊಳ್ಳುವುದಿಲ್ಲ. ಪ್ರೈಮರಿ ಶಾಲೆಗಳ ಅಂಕಿ ಅಂಶ ಕೇಳಿದ್ದರೆ ಕೊಡುತ್ತಿದ್ದೆ. ನೀವು ಹೇಳುವುದನ್ನು ಒಪ್ಪುವುದಕ್ಕಾಗುವುದಿಲ್ಲ.

ಶ್ರೀ ಬಿ. ಚನ್ನಬೈರೇಗೌಡರು.—ಈಗ ಕೊಟ್ಟಿರುವ 50 ನ್ಯೂಟೈಪ್ ಮಿಡ್ಲ್ ಸ್ಕೂಲುಗಳಿಗೆ ಬೇಕಾದಷ್ಟು ಕರಿಯಾಗಿ ಉಪಾಧ್ಯಾಯರಿದ್ದಾರೆಯೇ ?

ಮಾನ್ಯ ಶ್ರೀ ಕೆ. ಚೆಂಗಲರಾಯರೆಡ್ಡಿಯವರು.—ನೋಟೀಸ್.

ಶ್ರೀ ಬಿ. ಚನ್ನಬೈರೇಗೌಡರು.—ಅವುಗಳು ಸರ್ಕಾರಿ ಕಟ್ಟಡಗಳೊ ಅಥವಾ ಖಾಸಗಿ ಕಟ್ಟಡಗಳೊ ?

ಮಾನ್ಯ ಶ್ರೀ ಕೆ. ಚೆಂಗಲರಾಯರೆಡ್ಡಿಯವರು.—ಕೆಲವು ಸರ್ಕಾರಿ, ಕೆಲವು ಖಾಸಗಿ ಸರ್ಕಾರಿ.

ಶ್ರೀ ಬಿ. ಚನ್ನಬೈರೇಗೌಡರು.—ಆ ಕಟ್ಟಡಗಳು ಉತ್ತಮ ಸ್ಥಿತಿಯಲ್ಲಿಲ್ಲವೆಂಬುದು ಸರ್ಕಾರದವರ ಗಮನಕ್ಕೆ ಬಂದಿದೆಯೆ ?

ಮಾನ್ಯ ಶ್ರೀ ಕೆ. ಚೆಂಗಲರಾಯರೆಡ್ಡಿಯವರು.—ಇಲ್ಲ, ಕೆಲವು ಕಡೆ ಬೇಕಾದಷ್ಟು ಕೆಲಸ ಮಾಡಬೇಕಾಗಿದೆ. ಕೆಲವನ್ನು ರಿಪೇರಿ ಮಾಡಬೇಕಾಗಿದೆ, ಮತ್ತೆ ಕೆಲವನ್ನು ಬದಾನಿ ಮಾಡಬೇಕಾಗಿದೆ. ಎಲ್ಲವನ್ನೂ ಸರ್ಕಾರದವರೇ ಮಾಡಬೇಕೆಂದರೆ ಕಷ್ಟ ; ಉದಾರಿಗಳ ಮತ್ತು ದಾನಿಗಳ ಸಹಾಯವನ್ನು ಪಡೆದು ಮಾಡಬೇಕೆಂಬ ಆಶಯವಿದೆ. ಮಾನ್ಯ ಸದಸ್ಯರೂ ಇದಕ್ಕೆ ಸಹಾಯ ಮಾಡಿದರೆ ಬಹಳ ಸಂತೋಷ.

ಶ್ರೀ ಎ. ಜಿ ಬಂದಿಗೌಡರು (ಮಂಡ್ಯಜಿಲ್ಲೆ).—ಪಕ್ಕಾ ಮಿಡ್ಲ್ ಸ್ಕೂಲುಗಳಿಗೆ ಬದಲಾಗಿ ನ್ಯೂಟೈಪ್ ಮಿಡ್ಲ್ ಸ್ಕೂಲುಗಳನ್ನು ಕೊಟ್ಟರೆ ಖರ್ಚಿನಲ್ಲಿ ಉಳಿತಾಯವಾಗುತ್ತದೆಯೆ ?

ಮಾನ್ಯ ಶ್ರೀ ಕೆ. ಚೆಂಗಲರಾಯರೆಡ್ಡಿಯವರು.—ನೋಟೀಸ್.

ಶ್ರೀ ಎ. ಜಿ. ಬಂದೀಗೌಡರು.—ನ್ಯೂಟೈಪ್ ಮಿಡ್ಲ್ ಸ್ಕೂಲುಗಳನ್ನು ಹೆಚ್ಚು ಮಾಡಿ ಪಕ್ಕಾ ಸ್ಕೂಲುಗಳನ್ನು ಕಡಿಮೆ ಕೊಟ್ಟಿರುವುದು ಕೇವಲ ಸರ್ಕಾರಕ್ಕೆ ಹಣ ಉಳಿಸಬೇಕೆಂಬ ಉದ್ದೇಶದಿಂದಲ್ಲವೆ ?

ಮಾನ್ಯ ಶ್ರೀ ಕೆ ಚೆಂಗಲರಾಯರೆಡ್ಡಿಯವರು.—ನೋಟೀಸ್.

ಶ್ರೀ ಎಸ್. ಸಿದ್ದಪ್ಪನವರು (ಶಿವಮೊಗ್ಗ ಜಿಲ್ಲೆ).—ಈಗ quantitative expansion and qualitative expansion ಎರಡೂ ಏನಂತು ಹೋಗಿದೆಯೆಂಬುದು ಸರ್ಕಾರದವರ ಗಮನಕ್ಕೆ ಬಂದಿದೆಯೆ ?

ಮಾನ್ಯ ಶ್ರೀ ಕೆ. ಚೆಂಗಲರಾಯರೆಡ್ಡಿಯವರು.—ಇಲ್ಲ.

ಶ್ರೀ ಎಸ್. ಸಿದ್ದಪ್ಪನವರು.—ನೆನ್ನೆಯ ದಿನ ಶ್ರೀಪಾರ್ ಟಿ. ಸುಬ್ರಹ್ಮಣ್ಯರವರು ಕೇಳಿದ್ದ ಒಂದು ಪ್ರಶ್ನೆಗೆ ಉತ್ತರವಾಗಿ-ದಕ್ಷಿಣಕನ್ನಡೆಯ ಪಬ್ಲಿಕ್ ವರ್ಕ್ಸ್ ಸಬ್ ಡಿವಿಜನ್ನಿನಲ್ಲಿರುವ ಪ್ರೈಮರಿ ಸ್ಕೂಲು ಕಟ್ಟಡಗಳ ವಿಚಾರದಲ್ಲಿ ದಾವಣಗೆರೆ, ಹರಿಯೂರು, ಹರಿಹರ, ಜಗಳೂರು ಮುಂತಾದ ಸ್ಥಳಗಳಲ್ಲಿ ಅರ್ಧ ಕೆಲಸವಾಗಿರುವ ಕಟ್ಟಡಗಳನ್ನು ನಿಲ್ಲಿಸಿದ್ದಾರೆಂದು ತಿಳಿಸಿಲ್ಲವೆ ?

ಮಾನ್ಯ ಶ್ರೀ ಕೆ. ಚೆಂಗಲರಾಯರೆಡ್ಡಿಯವರು.—ಇರಬಹುದು.

ಶ್ರೀ ಎಸ್. ಸಿದ್ದಪ್ಪನವರು.—ಅದರಿಂದ qualitative and quantitative expansion ಎರಡೂ ನಿಂತು ಹೋಗಿದೆಯಲ್ಲವೇ ?

ಮಾನ್ಯ ಶ್ರೀ ಕೆ. ಚೆಂಗಲರಾಯರೆಡ್ಡಿಯವರು.—ಇಲ್ಲ, quality ಕಡಿಮೆಯಾಗಿಲ್ಲ ; ಕಟ್ಟಡ ಪೂರ್ತಿ ಆಗದೆ ನಿಂತಿರಬಹುದು, ಇದು quantitative.

ಶ್ರೀ ಎಸ್. ಸಿದ್ದಪ್ಪನವರು.—ಈಗಾಗಲೇ ಪ್ರಾರಂಭ ಮಾಡಿರುವ ಸ್ಕೂಲುಗಳಿಗೆ ಕಟ್ಟಡ, equipment ಮುಂತಾದ ಸಲಕರಣೆಗಳಿಲ್ಲವೆಂದು ಆಕ್ಷೇಪಣೆ ಬಂದಿದೆಯೆಂದು ಹೇಳಿದಿರಿ, ಇದನ್ನೆಲ್ಲಾ ನೋಡಿದರೆ ಕಟ್ಟಡ, equipment ಯಾವುದನ್ನೂ ಸರ್ಕಾರದವರು ಏರ್ಪಾಡು ಮಾಡಿಲ್ಲವೆಂಬುದು ವ್ಯಕ್ತವಾಗುತ್ತದಲ್ಲವೆ ?

ಮಾನ್ಯ ಶ್ರೀ ಕೆ. ಚೆಂಗಲರಾಯರೆಡ್ಡಿಯವರು.—ಕೆಲವು ಕಡೆ ಮಾತ್ರ ಹಾಗಿರಬಹುದು ; ಅದನ್ನು ಹಾಗೆಯೇ ಬಿಟ್ಟುಬಿಡುವುದಿಲ್ಲ, ಪೂರೈಸಿ ಮುಂದುವರಿಸಿಕೊಂಡು ಹೋಗಬೇಕೆಂಬುದು ಸರ್ಕಾರದವರ ನೀತಿ. ಎಲ್ಲೋ ಮೂರು ನಾಲ್ಕು ಕಡೆ ಹಾಗಿದ್ದ ಮಾತ್ರಕ್ಕೇ ಎಲ್ಲಾ ಕಡೆಯೂ ಹೀಗೆಯೇ ಇದೆ ಎಂದು ತಿಳಿಯುವುದು ಸರಿಯಲ್ಲ.

ಶ್ರೀ ಎಸ್. ಸಿದ್ದಪ್ಪನವರು.—ಒಂದು ಸಬ್ ಡಿವಿಜನ್ನಿನಲ್ಲೇ 13-14 ಕಟ್ಟಡಗಳು ಹೀಗಿವೆಯಲ್ಲ ?

The Hon'ble Sri K. CHENGALARAYA REDDY.—It is a fact that Government issued a circular sometime back that work in respect of all incomplete buildings may be stopped for sometime. We are examining the financial position and we want to see how far we can go. We want to draw up a programme. It is not as though we have stopped them permanently. The whole matter is being examined and necessary steps will be taken very early.

ಶ್ರೀ ಎಸ್. ಸಿದ್ದಪ್ಪನವರು.—ಅರ್ಧ ಕಟ್ಟಡದ ಕೆಲಸ ಆಗಿ ವರ್ಷ, ಎರಡು ವರ್ಷ ಹೀಗೆ ನಿಲ್ಲಿಸಿಬಿಟ್ಟರೆ ಅಷ್ಟೂ ನಷ್ಟವಾಗುತ್ತದೆಂಬ ವಿಚಾರ ಸರ್ಕಾರದ ಗಮನದಲ್ಲಿದೆಯೆ ?

ಮಾನ್ಯ ಶ್ರೀ ಕೆ. ಚೆಂಗಲರಾಯರೆಡ್ಡಿಯವರು.—ಅದು ಸರ್ಕಾರದ ಗಮನದಲ್ಲಿದೆ.

ಶ್ರೀ ಎಸ್. ಸಿದ್ದಪ್ಪನವರು.—ಅರ್ಧಕ್ಕೆ ಬಂದು ನಿಲ್ಲಿಸಿರುವ ಕಟ್ಟಡಗಳನ್ನೂ ಮುಂದಿನ ವರ್ಷವಾದರೂ ಪೂರೈಸುವುದಕ್ಕೆ ಬೇಕಾದಷ್ಟು ಹಣವನ್ನು ಮುಂದಿನ ವರ್ಷದ ಬಡ್ಜೆಟ್ಟಿನಲ್ಲಿ ಒದಗಿಸುತ್ತೀರಾ ?

ಮಾನ್ಯ ಶ್ರೀ ಕೆ. ಚೆಂಗಲರಾಯರೆಡ್ಡಿಯವರು.—ಅಂತಹ ಕಟ್ಟಡಗಳನ್ನು ಪೂರೈಸುವುದಕ್ಕೆ ಸರ್ವ ಪ್ರಯತ್ನವನ್ನೂ ಮಾಡುತ್ತೇವೆ.

Sri A. BHEEMAPPA NAIK (Chitaldrug District-General).—Is it not a fact that Government have again been providing amounts for completing the buildings which have come to the roofing level?

The Hon'ble Sri K. CHENGALARAYA REDDY.—In some cases we have already done it.

ಶ್ರೀ ಬಿ. ಹುಚ್ಚೇಗೌಡರು (ತುಮಕೂರು ಜಿಲ್ಲೆ).—ಹೋದ ವರ್ಷ ಮಿಡ್ಲ್ ಸ್ಕೂಲುಗಳು ಬೇಕೆಂದು ಎಷ್ಟು ಕಡೆಗಳಿಂದ ಅರ್ಜಿಗಳು ಬಂದಿವೆ?

ಮಾನ್ಯ ಶ್ರೀ ಕೆ. ಚೆಂಗಲರಾಯರೆಡ್ಡಿಯವರು.—ನೋಟೀಸ್.

ಶ್ರೀ ಬಿ. ಹುಚ್ಚೇಗೌಡರು.—ಪ್ರತಿಯೊಂದು ದಿಸ್ಟ್ರಿಕ್ಟ್‌ನವರೂ ಇಷ್ಟಿಷ್ಟು ಕೊಡಬೇಕೆಂದು ಕೇಳಿರುವುದು ಸರ್ಕಾರದವರಿಗೆ ಗೊತ್ತಿದೆಯೆ?

ಮಾನ್ಯ ಶ್ರೀ ಕೆ. ಚೆಂಗಲರಾಯರೆಡ್ಡಿಯವರು.—ನೋಟೀಸ್.

ಶ್ರೀ ಬಿ. ಹುಚ್ಚೇಗೌಡರು.—1949-50 ನೆಯ ಸಾಲಿಗಿಂತ 1948-49 ರಲ್ಲಿ ಜಾಸ್ತಿ ಮಿಡ್ಲ್ ಸ್ಕೂಲುಗಳನ್ನು ಕೊಟ್ಟಿದ್ದಾರಲ್ಲವೆ?

ಮಾನ್ಯ ಶ್ರೀ ಕೆ. ಚೆಂಗಲರಾಯರೆಡ್ಡಿಯವರು.—ಉತ್ತರದಲ್ಲೇ ಅಂಕಿಅಂಶಗಳಿವೆ.

ಶ್ರೀ ಬಿ. ಹುಚ್ಚೇಗೌಡರು.—1950-51 ರಲ್ಲಿ ಒಂದು ಪಕ್ಕಾ ಮಿಡ್ಲ್ ಸ್ಕೂಲು ಕೊಡಲಾಗಿದೆ; ಅದು ಯಾವ ಊರಿನಲ್ಲಿ?

ಮಾನ್ಯ ಶ್ರೀ ಕೆ. ಚೆಂಗಲರಾಯರೆಡ್ಡಿಯವರು.—ನೋಟೀಸ್.

ಶ್ರೀ ಬಿ. ಹುಚ್ಚೇಗೌಡರು.—1950 ರಲ್ಲಿ ಮುಂದೆ ಮಿಡ್ಲ್‌ಸ್ಕೂಲುಗಳನ್ನು ಕೊಡುವುದನ್ನು ನಿಲ್ಲಿಸಬೇಕೆಂದು ಹೇಳಿ ಸರ್ಕಾರದ ನೀತಿಯನ್ನು ಬದಲಾಯಿಸಿದ್ದಾರೆಯೆ?

ಮಾನ್ಯ ಶ್ರೀ ಕೆ. ಚೆಂಗಲರಾಯರೆಡ್ಡಿಯವರು.—ಹಾಗಲ್ಲ; ಕೊಡುವುದೇ ಇಲ್ಲವೆಂದೇನೂ ಮಾಡಿಲ್ಲ; ಬರುವ ವರ್ಷ ಬಡ್ಜೆಟ್ ತಯಾರು ಮಾಡುವಾಗ ಎಲ್ಲವನ್ನೂ ದೃಷ್ಟಿಯಲ್ಲಿಟ್ಟುಕೊಂಡು ಎಷ್ಟು ಸ್ಕೂಲುಗಳನ್ನು ಕೊಡಬಹುದೆಂಬುದನ್ನು ತೀರ್ಮಾನ ಮಾಡಬೇಕಾಗಿದೆ.

ಶ್ರೀ ಬಿ. ಹುಚ್ಚೇಗೌಡರು.—ಹಾಗಾದರೆ ಕೊಡದೇ ಯಿರುವುದಕ್ಕೆ ಹಣಕಾಸಿನ ಪರಿಸ್ಥಿತಿಯೇ ಕಾರಣವೇ?

ಮಾನ್ಯ ಶ್ರೀ ಕೆ. ಚೆಂಗಲರಾಯರೆಡ್ಡಿಯವರು.—ಹೌದು.

ಶ್ರೀ ಬಿ. ಹುಚ್ಚೇಗೌಡರು.—ಒಂದು ಪಕ್ಕಾ ಮಿಡ್ಲ್ ಸ್ಕೂಲಿಗಾಗುವ ಖರ್ಚಿನಲ್ಲಿ ಮೂರು ನ್ಯೂಟ್ರೈಪ್ ಮಿಡ್ಲ್ ಸ್ಕೂಲುಗಳಾಗಬಹುದೆ?

ಮಾನ್ಯ ಶ್ರೀ ಕೆ. ಚೆಂಗಲರಾಯರೆಡ್ಡಿಯವರು.—ನೋಟೀಸ್.

ರಾಜಮಂತ್ರಪ್ರವೀಣ ಎಚ್. ಬಿ. ಗುಂಡಪ್ಪಗೌಡರು (ಹಾಸನ ಜಿಲ್ಲೆ).—ಮಿಡ್ಲ್ ಸ್ಕೂಲುಗಳು ಸರಿಯಾಗಿಲ್ಲವೆಂದು complaints ಬಂದಿದೆ; ಅದುದರಿಂದ ನೀತಿಯನ್ನು ಬದಲಾಯಿಸಿದ್ದಾರೆ, ಎಂದು ಸರ್ಕಾರದವರು ಹೇಳಿದರು ಸರಿಯಾಗಿ ಕೆಲಸ ಮಾಡುವುದಿಲ್ಲವೆಂದು ಬಂದಿದೆಯೋ ಬೇರೆ ಕಾರಣಗಳೋ?

ಮಾನ್ಯ ಶ್ರೀ ಕೆ. ಚೆಂಗಲರಾಯರೆಡ್ಡಿಯವರು.—ನಾನಾ ಕಾರಣಗಳು, ಎಂದು ಆಗಲೇ ಉತ್ತರ ಹೇಳಿದ್ದೇನೆ.

ಶ್ರೀ ಎಚ್. ಬಿ. ಗುಂಡಪ್ಪಗೌಡರು.—ನೀವು ಪಕ್ಕಾ ಮಿಡ್ಲ್‌ಸ್ಕೂಲ್ ಕೊಡದೇ ಇರುವುದರಿಂದ ಕೊನೆಪಕ್ಷ ನ್ಯೂಟ್ರೈಪ್ ಮಿಡ್ಲ್‌ಸ್ಕೂಲನ್ನಾದರೂ ಕೊಡಿ ಎಂದು ಅನೇಕ ಕಡೆ ಕೇಳಿದ್ದಾರೆಯೇ?

ಮಾನ್ಯ ಶ್ರೀ ಕೆ. ಚೆಂಗಲರಾಯರೆಡ್ಡಿಯವರು.—ತಾವು ಹೇಳಿದ ಮೊದಲನೆಯ ಕಾರಣದಿಂದಲೇ ಹೆಚ್ಚಾಗಿ ನ್ಯೂಟ್ರೈಪ್ ಮಿಡ್ಲ್‌ಸ್ಕೂಲುಗಳನ್ನು ಕೊಡಿ ಎಂದು ಕೇಳಿದ್ದಾರೆ.

ಶ್ರೀ ಎಚ್. ಬಿ. ಗುಂಡಪ್ಪಗೌಡರು.—ಹೀಗೆ ಮಿಡ್ಲ್ ಸ್ಕೂಲುಗಳನ್ನು ಹೆಚ್ಚಾಗಿ ಕೊಡದೆ ಇರುವುದರಿಂದ ಪ್ರೈಮರಿ ಸ್ಕೂಲಿನಿಂದ ತೇರ್ಗಡೆಯಾದವರು, ಮಿಡ್ಲ್ ಸ್ಕೂಲಿಗೆ ಹೋಗುವುದಕ್ಕೂ, ಮಿಡ್ಲ್‌ಸ್ಕೂಲಿನಿಂದ ಹೈಸ್ಕೂಲಿಗೆ ಹೋಗುವುದಕ್ಕೂ ಅನುಕೂಲ ಕಲ್ಪನೆ ಆಗದೆ ಅಲ್ಲೇ bottle neck create ಆಗಿ ಪ್ರೈಮರಿ ಸ್ಕೂಲಿನಲ್ಲಿ ವಿದ್ಯಾಭ್ಯಾಸ ಮುಗಿದವೇರೆ, ವ್ಯಾಸಂಗ ಮಾಡುವುದನ್ನು ಮುಂದುವರಿಸುವುದಕ್ಕಾಗುವುದಿಲ್ಲ ಎಂಬುದನ್ನು ಸರ್ಕಾರದವರು ಆಲೋಚನೆಮಾಡಿದ್ದಾರೆಯೇ?

ಮಾನ್ಯ ಶ್ರೀ ಕೆ. ಚೆಂಗಲರಾಯರೆಡ್ಡಿಯವರು.—ಆಲೋಚನೆಮಾಡಿದ್ದೇವೆ; ಮಾನ್ಯ ಸದಸ್ಯರು ಹೇಳುವುದು ಸರಿ ಎಂದು ಒಪ್ಪುತ್ತೇನೆ.

ಶ್ರೀ ಎಚ್. ಬಿ ಗುಂಡಪ್ಪಗೌಡರು.—ಪಕ್ಕಾ ಮಿಡ್ಲ್ ಸ್ಕೂಲು ಕೊಡಬೇಕೆಂದು ಅನೇಕ ಕಡೆಗಳಿಂದ ಅರ್ಜಿಗಳು ಬರುತ್ತಿವೆಯೆ?

ಮಾನ್ಯ ಶ್ರೀ ಕೆ. ಚೆಂಗಲರಾಯರೆಡ್ಡಿಯವರು.—ಬರುತ್ತಾ ಇವೆ.

ಶ್ರೀ ಎಚ್. ಬಿ. ಗುಂಡಪ್ಪಗೌಡರು.—ಅನೇಕರು ಹಣ ಕೊಟ್ಟು, ಕಟ್ಟಡಗಳನ್ನು ಸಹ ಕಟ್ಟಿಸಿಕೊಡುತ್ತೇವೆ, ಮಿಡ್ಲ್‌ಸ್ಕೂಲು ಕೊಡಿ ಎಂದು ಅರ್ಜಿ ಹಾಕಿಕೊಂಡಿರುವುದು ತಮಗೆ ಬಂದಿದೆಯೆ?

ಮಾನ್ಯ ಶ್ರೀ ಕೆ. ಚೆಂಗಲರಾಯರೆಡ್ಡಿಯವರು.—ಬಂದಿದೆ.

ಶ್ರೀ ಎಚ್. ಬಿ. ಗುಂಡಪ್ಪಗೌಡರು.—1942 ನೇ ಇಸವಿಯಿಂದ ಒಂದು ಹೊಸ ನೀತಿಯನ್ನು ಹಾಕಿಕೊಂಡು ಹೆಚ್ಚು ಮಿಡ್ಲ್‌ಸ್ಕೂಲ್‌ಗಳನ್ನು ಕೊಡಬೇಕೆಂದು ಮಾಡಲಾಗಿತ್ತು. ಇದನ್ನು ಈಗ ಕದಮೆ ಸಂಖ್ಯೆಗೆ ಇಳಿಸಿದರೆ ಹಳ್ಳಿಗಾಡಿನವರಿಗೆ ತೊಂದರೆಯಾಗುವುದಿಲ್ಲವೇ?

ಮಾನ್ಯ ಶ್ರೀ ಕೆ. ಚೆಂಗಲರಾಯರೆಡ್ಡಿಯವರು.—ತೊಂದರೆ ಎಂಬುದು ಸರ್ಕಾರದವರ ಗಮನದಲ್ಲಿದೆ.

ಶ್ರೀ ಎಚ್. ಬಿ. ಗುಂಡಪ್ಪಗೌಡರು.—ಬರೀ ಹೈಸ್ಕೂಲುಗಳನ್ನು ಸ್ಥಾಪನೆಮಾಡುವುದರ ಕಡೆಗೇ ಗಮನ ಕೊಡದೆ, ಮಿಡ್ಲ್‌ಸ್ಕೂಲುಗಳನ್ನು ಹೆಚ್ಚಾಗಿ ಸ್ಥಾಪನೆ ಮಾಡಲು ವಿಶೇಷ ಗಮನ ಕೊಡುತ್ತೀರಾ?

ಮಾನ್ಯ ಶ್ರೀ ಕೆ. ಚೆಂಗಲರಾಯರೆಡ್ಡಿಯವರು.—ಪ್ರೈಮರಿ ಪಾಠಶಾಲೆಗಳು ಹೆಚ್ಚು, ಮಿಡ್ಲ್‌ಸ್ಕೂಲ್‌ಗಳು ಕಡಿಮೆಯಾದರೆ bottle neck create ಆಗಬಹುದು ಎಂದು ಹೇಳಿದಿರಿ. ಅದೇ ರೀತಿ ಮಿಡ್ಲ್‌ಸ್ಕೂಲುಗಳು ಸಾಕಷ್ಟು ಸ್ಥಾಪನೆಯಾಗಿ ಹೈಸ್ಕೂಲುಗಳು ಇಲ್ಲದೇ ಇದ್ದರೆ ಆಗಲೂ bottle neck create ಆಗಬಹುದು ಎಂದು ಕಂಡುಬಂದಿದ್ದರಿಂದ, ಹೈಸ್ಕೂಲುಗಳನ್ನು ಜಾಸ್ತಿಯಾಗಿ ಸ್ಥಾಪನೆ ಮಾಡುವುದ ಅವಶ್ಯಕತೆ ಉಂಟಾಯಿತು. ಮಿಡ್ಲ್ ಸ್ಕೂಲುಗಳು ಹಿಂದಿನ ವರ್ಷಗಳಲ್ಲಿ ಸ್ಥಾಪನೆಯಾಗಿರುವುದಕ್ಕಿಂತ ಸ್ವಲ್ಪ ಕಡಿಮೆಯಾಗಿರಬಹುದು.

ಶ್ರೀ ಎಚ್. ಬಿ. ಗುಂಡಪ್ಪಗೌಡರು.—ಹಾಗಾದರೆ ಇಷ್ಟೇ ಮಿಡ್ಲ್‌ಸ್ಕೂಲು, ಇಷ್ಟೇ ಹೈಸ್ಕೂಲು ಮತ್ತೆ

ಇಷ್ಟೇ ಕಾಲೇಜುಗಳನ್ನು ಸ್ಥಾಪನೆಮಾಡಬೇಕೆಂದು ಒಂದು ರೆಗ್ಯುಲರ್ ಪ್ಲಾನ್ ಇದೆಯೆ ?

ಮಾನ್ಯ ಶ್ರೀ ಕೆ. ಚೆಂಗಲರಾಯರೆಡ್ಡಿಯವರು.—ಮಾನ್ಯ ಸಭಾಸ್ಯರು ಸರ್ಕಾರದಲ್ಲಿ ಮಂತ್ರಿಗಳಾಗಿದ್ದಾಗ ಯಾವ ರೀತಿ ರೆಕ್ಕ ಹಾಕಿ ಒಂದು ಪ್ಲಾನ್ ಇಟ್ಟುಕೊಂಡಿದ್ದರೋ, ಅವಕ್ಕಿಂತ ಹೆಚ್ಚಿನ ರೀತಿಯ ಒಂದು ಪ್ಲಾನ್ ಇಟ್ಟುಕೊಂಡಿದ್ದೇವೆ.

ಶ್ರೀ ಎಚ್. ಎಂ. ಚನ್ನಬಸಪ್ಪನವರು (ಮೈಸೂರು ಜಿಲ್ಲೆ).—ದೇಶದಲ್ಲಿ ಮಿಡ್ಲ್‌ಸ್ಕೂಲುಗಳ ಅವಶ್ಯಕತೆ ಎಷ್ಟಿದೆ ಎಂಬ ಬಗ್ಗೆ ಅಂಕಿ ಅಂಶ ಇದೆಯೇ ?

ಮಾನ್ಯ ಶ್ರೀ ಕೆ. ಚೆಂಗಲರಾಯರೆಡ್ಡಿಯವರು. — ಅಂಕಿ ಅಂಶಗಳನ್ನು ತಯಾರುಮಾಡುತ್ತಾ ಇದ್ದೇವೆ. ಇನ್ನೂ ನರಿಯಾಗಿ ತಯಾರಾಗಿಲ್ಲ.

ಶ್ರೀ ಎಚ್. ಎಂ. ಚನ್ನಬಸಪ್ಪನವರು.—ಇಷ್ಟು ವರ್ಷಕ್ಕೆ ಇಷ್ಟು ಸ್ಕೂಲು ಸ್ಥಾಪನೆ ಮಾಡಬೇಕು ಎಂಬ ಒಂದು planned basis ಮೇರೆ ಮುಂದುವರಿಯುತ್ತಾ ಇದ್ದೀರಾ ?

ಮಾನ್ಯ ಶ್ರೀ ಕೆ. ಚೆಂಗಲರಾಯರೆಡ್ಡಿಯವರು.— ಅದೇ ರೀತಿ ಮುಂದುವರಿಯುತ್ತಾ ಇದ್ದೇವೆ. ನಾನು ಮೊದಲೇ ಹೇಳಿದಹಾಗೆ ಸ್ಯಾನ್‌ಟಿಫಿಕ್ ಆಗಿ ಒಂದು ಪ್ಲಾನನ್ನು ಇದುವರೆಗೂ ಯಾವ ಮಂತ್ರಿಮಂಡಲದವರೂ ಮಾಡಿಲ್ಲ ಎಂದು ಹೇಳಬಹುದು.

ಶ್ರೀ ಎಚ್. ಬಿ. ಗುಂಡಪ್ಪಗೌಡರು.—ಯಾರೂ ಮಾಡಿಲ್ಲ ಎಂದು ಹೇಳಬೇಡಿ ; ನೀವು ಮಾಡಿಲ್ಲ ಎಂದು ಹೇಳಿ.

ಮಾನ್ಯ ಶ್ರೀ ಕೆ. ಚೆಂಗಲರಾಯರೆಡ್ಡಿಯವರು.— ಒಂದುಪಕ್ಷ ನೀವು ಮಾಡಿದ್ದರೂ ಈಗ ಅದು ಸಕ್ಕೆಟರಿಯಟ್ಟಿನಲ್ಲಿ ಎಲ್ಲಿ ಇದೆಯೋ ಗೊತ್ತಿಲ್ಲ. ನಾವು ವಿದ್ಯಾಭ್ಯಾಸಕ್ಕೆ ಐದು ವರ್ಷದ ಯೋಜನೆ, ಇತರ ಇರಾಜೆಗಳಿಗೆ 3 ವರ್ಷದ ಯೋಜನೆ ಹಾಕಿದ್ದೇವೆ. ಹಿಂದೆ ಹೇಗೆ ಇತ್ತೋ ಹಾಗೆ ಇಲ್ಲ, ಸ್ಕೈಟಿಫಿಕ್ ಪ್ಲಾನು ಮಾಡಿಕೊಂಡಿದ್ದೇವೆ.

ಶ್ರೀ ಎಚ್. ಎಂ. ಚನ್ನಬಸಪ್ಪನವರು.—ಈಗಾಗಲೇ ಹೈಸ್ಕೂಲುಗಳಿದ್ದು ಅವುಗಳಿಗೆ ಫೀಡ್ ಮಾಡತಕ್ಕ ಅವಶ್ಯಕತೆ ಇರುವಕಡೆ ಮಿಡ್ಲ್‌ಸ್ಕೂಲು ಸ್ಥಾಪನೆಮಾಡುವುದನ್ನು ಸರ್ಕಾರದವರು ಗಮನದಲ್ಲಿಟ್ಟುಕೊಳ್ಳುತ್ತಾರೆಯೆ ?

The Hon'ble Sri K. CHENGALARAYA REDDY.—All those aspects will be borne in mind.

ಶ್ರೀ ಎಚ್. ಎಂ. ಚನ್ನಬಸಪ್ಪನವರು.—ನ್ಯೂಟ್ರೈಪ್ ಮಿಡ್ಲ್‌ಸ್ಕೂಲುಗಳಲ್ಲಿ ದಕ್ಷತೆಯುಂದ ಕೆಲಸ ನಡೆಯುವುದು ಕಮ್ಮಿ ಎಂಬುದು ಗೊತ್ತೆ ?

ಮಾನ್ಯ ಶ್ರೀ ಕೆ. ಚೆಂಗಲರಾಯರೆಡ್ಡಿಯವರು.— ತಾವು ಯಾವ ಮಟ್ಟಕ್ಕೆ ಇರಬೇಕೆಂದು ದೃಷ್ಟಿಯಲ್ಲಿಟ್ಟುಕೊಂಡಿದ್ದೀರೋ ಅದಕ್ಕಿಂತ ಸ್ವಲ್ಪ ಕಮ್ಮಿ ಎಂದು ಉತ್ತರ ಕೊಡಬೇಕಾಗಿದೆ.

ಶ್ರೀ ಎಚ್. ಎಂ. ಚನ್ನಬಸಪ್ಪನವರು.—ಮಿಡ್ಲ್ ಸ್ಕೂಲು ಕೊಡಬೇಕೆಂದು ಹಾಕಿಕೊಂಡಿರತಕ್ಕ ಆರ್ಜಿಗಳ ಪಟ್ಟಿಯಲ್ಲಿ ಎಕ್ಸ್‌ಪ್‌ಮೆಂಟು ಮತ್ತು ಕಟ್ಟಡ ಇವೆರಡನ್ನೂ ಒದಗಿಸಿ ಕೊಡುತ್ತೇವೆ ಎಂದು ಯಾರು ಮುಂದೆ ಬರುತ್ತಾರೋ ಅವರಿಗೆ ಫಸ್ಟ್ ಪ್ರಿಫರೆನ್ಸ್ ಕೊಡುತ್ತೀರಾ!

ಮಾನ್ಯ ಶ್ರೀ ಕೆ. ಚೆಂಗಲರಾಯರೆಡ್ಡಿಯವರು.— ಅದನ್ನು ಈ ತಕ್ಷಣ ಹೇಳುವುದಕ್ಕಾಗುವುದಿಲ್ಲ ; ಏಕೆಂದರೆ ಕೆಲವು ಕಡೆ ಮಿಡ್ಲ್ ಸ್ಕೂರ್ ಇಲ್ಲದೇ ಇದ್ದರೆ, ಇತರರಿಂದ ಸಹಾಯ ಬರಲಿ, ಬರದೇ ಇರಲಿ, ಏಕ್ಟಿವ್ ಮೆಂಟು, ಕಟ್ಟಡ ಎರ್ಲಾ ಕೊಟ್ಟು ಸ್ಕೂಲು ಸ್ಥಾಪನೆ ಆಗಬೇಕು. ಎರಡು ಮೂರು ಸ್ಕೂಲುಗಳು ಇರುವ ಕಡೆ ಸ್ವಲ್ಪ ಅರೋಜನೆಮಾಡಬೇಕು.

ಶ್ರೀ ಎಂ. ಸಿ. ಶಿವಾನಂದಶರ್ಮರವರು (ಬೆಂಗಳೂರು ಜಿಲ್ಲೆ).—ನ್ಯೂಟ್ರೈಪ್ ಮಿಡ್ಲ್‌ಸ್ಕೂಲುಗಳನ್ನು ಕೊಡುವುದು ಪಕ್ಕಾ ಮಿಡ್ಲ್‌ಸ್ಕೂಲುಗಳನ್ನು ಕೊಡುವುದರ ಮೊದಲನೆಯ ಸೂಚನೆ ಅಲ್ಲವೇ ?

ಮಾನ್ಯ ಶ್ರೀ ಕೆ. ಚೆಂಗಲರಾಯರೆಡ್ಡಿಯವರು.— ಹಾಗೂ ಅಂದುಕೊಳ್ಳಬಹುದು.

ಶ್ರೀ ಎಂ. ಸಿ. ಶಿವಾನಂದಶರ್ಮರವರು.—ಹಾಗಾದರೆ 1945-46 ರಿಂದ ಆ ರೀತಿ ಕೊಟ್ಟಿದ್ದರೆ, ಈ ನಾಲ್ಕು ವರ್ಷಗಳಲ್ಲಿ ಅನೇಕ ಪಕ್ಕ ಮಿಡ್ಲ್‌ಸ್ಕೂಲುಗಳು ಆಗಬೇಕಾಗಿತ್ತು. ಆ ರೀತಿ ಆಗದೇ ಇರುವುದರಿಂದ ಮಕ್ಕಳಿಗೆ ವಿದ್ಯಾಭ್ಯಾಸಕ್ಕೆ ತೊಂದರೆಯಾಗಿ ಮಕ್ಕಳ ವಿದ್ಯಾಭ್ಯಾಸ ಕೆಟ್ಟುಹೋಗಿದೆ ಎಂದು ಒಪ್ಪಿಕೊಳ್ಳುತ್ತೀರಾ ?

ಮಾನ್ಯ ಶ್ರೀ ಕೆ. ಚೆಂಗಲರಾಯರೆಡ್ಡಿಯವರು.— ಸಂಪೂರ್ಣವಾಗಿ ಒಪ್ಪಿಕೊಳ್ಳುವುದಕ್ಕಾಗುವುದಿಲ್ಲ.

ಶ್ರೀ ಗೋವಿಂದದಾಸ್‌ರವರು (ಹಾಸನ ನಿಮ್ನ ಪಂಗಡ).—ಗ್ರಾಮಾಂತರ ಪ್ರದೇಶಗಳಲ್ಲಿ ನ್ಯೂಟ್ರೈಪ್ ಮಿಡ್ಲ್‌ಸ್ಕೂಲುಗಳನ್ನು ಸ್ಥಾಪನೆಮಾಡಿದ್ದರಿಂದ ಬಡವರ ವಿದ್ಯಾಭ್ಯಾಸಕ್ಕೇ ಅನುಕೂಲವಾಯಿತು ಎಂಬುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಮಾನ್ಯ ಶ್ರೀ ಕೆ. ಚೆಂಗಲರಾಯರೆಡ್ಡಿಯವರು.— ಆ ದೃಷ್ಟಿಯಿಂದಲೇ ಇದನ್ನೆಲ್ಲಾ ಮಾಡಿರುವುದು.

ಶ್ರೀ ಗೋವಿಂದದಾಸ್‌ರವರು.—ನ್ಯೂಟ್ರೈಪ್ ಮಿಡ್ಲ್ ಸ್ಕೂಲು ಸ್ಥಾಪನೆಮಾಡಬೇಕೆಂದು ಹೇಳಿ ಕಟ್ಟಡ ಕಟ್ಟಿಸಿ ಕೊಡಲು ಬಹಳ ದಿವಸದಿಂದಲೂ ಸರ್ಕಾರದವರಲ್ಲಿ ಹಣ ಡಿವಾಸಿಟ್ ಮಾಡಿರುವವರು ಎಷ್ಟು ಜನ ?

ಮಾನ್ಯ ಶ್ರೀ ಕೆ. ಚೆಂಗಲರಾಯರೆಡ್ಡಿಯವರು.— ಈ ಪ್ರಶ್ನೆ ಉದ್ಭವಿಸುವುದಿಲ್ಲ. ಇಷ್ಟು ಮಾತ್ರ ಈ ಸಂದರ್ಭದಲ್ಲಿ ಹೇಳಬಹುದು : ನಮ್ಮ ಸಂಸ್ಥಾನದಲ್ಲಿ ಅನೇಕ ಕಡೆ ಶಾಲೆಗಳನ್ನು ವ್ಯಾರಂಭಮಾಡಬೇಕೆಂದು ಒತ್ತಾಯ ಇದೆ. ಶಾಲೆಗಳು, ರಸ್ತೆಗಳು, ಸೇತುವೆಗಳು ಮುಂತಾದ ಅನೇಕ ಅನುಕೂಲಗಳನ್ನು ಕಲ್ಪಿಸಿಕೊಡಬೇಕೆಂದು ಒತ್ತಾಯ ಬರುತ್ತಾ ಇದೆ. ಆದರೆ ನಮ್ಮ ಬಡ್ಜೆಟ್ ಎಷ್ಟು ಇದೆ, ಜನರು ಹೊಸ ತೆರಿಗೆ ಹೊರುವುದಕ್ಕೆ ಎಷ್ಟು ಮಟ್ಟಿಗೆ ಸಿದ್ಧವಾಗಿದ್ದಾರೆ, ಎಷ್ಟು ಮಟ್ಟಿಗೆ ನಾನಾ ಬಾಬುಗಳಲ್ಲಿ ಖೋತಾ ಮಾಡುವುದಕ್ಕೆ ಸಾಧ್ಯ ಎಂಬುದನ್ನೆಲ್ಲಾ ನೋಡಿಕೊಂಡು ಮಾಡಬೇಕೇ ಹೊರತು ಸುಮ್ಮನೆ ಆಗುವುದಿಲ್ಲ. ಅಶೆಗಳೇನೋ ಬೇಕಾದಷ್ಟು ಇರುತ್ತವೆ. ಇದನ್ನೆಲ್ಲಾ ಗಮನದಲ್ಲಿಟ್ಟುಕೊಂಡು ಎಷ್ಟು ತ್ವರಿತವಾಗಿ ಹೋಗುವುದಕ್ಕೆ ಸಾಧ್ಯವೋ ಅಷ್ಟು ತ್ವರಿತವಾಗಿ ಹೋಗುತ್ತೇವೆ.

ಶ್ರೀ ಡಿ. ಗೋವಿಂದದಾಸರು.—ಇಲ್ಲವೇ, ಈಗ ನೀವು ಕಟ್ಟಡಗಳನ್ನು ಕಟ್ಟಿಸಿ ಕೊಡಬೇಕು, ಇಲ್ಲದಿದ್ದರೆ ಅವರುಗಳು ಕೊಟ್ಟಿರತಕ್ಕ ಹಣವನ್ನು ವಾಪಸು ಕೊಡಬೇಕು. ಹಾಗೆ ಮಾಡದೆ ಸದ್ಯಕ್ಕೆ 30%—ಮಾತ್ರ ಸರ್ಕಾರದವರು ಕೊಡುತ್ತಾರೆಂದು ಒಂದು ಸರ್ಕ್ಯುಲರ್ ಹೊರಡಿಸಿರುವುದು ನಿಜವೇ ?

ಮಾನ್ಯ ಶ್ರೀ ಕೆ. ಚೆಂಗಲರಾಯರೆಡ್ಡಿಯವರು.— ಹೌದು, ಹಾಗೆ ಸರ್ಕ್ಯುಲರ್ ಹೊರಡಿಸಬೇಕಾಗಿ ಬಂದದ್ದರಿಂದ ಹೊರಡಿಸಿದ್ದೇವೆ. ಡಿವಾಜಿಟ್ ಕೊಟ್ಟವರೆಲ್ಲರೂ ಏಕೆ ಕಟ್ಟಡವನ್ನು ಕಟ್ಟಿಸಿಕೊಡಲಲ್ಲವೆಂದು, ಒತ್ತಾಯಮಾಡುವುದಕ್ಕೆ ವ್ಯಾರಂಭ ಮಾಡಿದರು. ಕಾಲು ಭಾಗ, ಮೂರನೆಯ ಒಂದು ಭಾಗ ಕೊಟ್ಟುರ್ರೆ ಕಟ್ಟಡ,

(ಮಾನ್ಯ ಶ್ರೀ ಕೆ. ಚೆಂಗಲರಾಯರೆಡ್ಡಿಯವರು.)

ಮಾಡಿಸಿಕೊಡುತ್ತೇವೆಂದು ಸರ್ಕಾರದವರು commit ಮಾಡಿಕೊಂಡರೆ, ಈ ಮಿಕ್ಕ ಮುಕ್ಕಾಲು ಭಾಗವನ್ನು ಒದಗಿಸಬೇಕಾದರೆ ಎಷ್ಟು ಕೋಟಿ ರೂಪಾಯಿಗಳಾಗುತ್ತವೆ.!! ಇದನ್ನು ಒದಗಿಸುವುದು ಎಷ್ಟು ಕಷ್ಟವೆಂದು ಆಲೋಚನೆಮಾಡಿ, ಡಿಪಾಜಿಟ್ ಆಗರೇ ತೆಗೆದುಕೊಂಡಿದ್ದರೆ ಕಟ್ಟಿಸಿಕೊಡಿಯೆಂದು ಹೇಳಿ ಇನ್ನು ಮುಂದೆ ಡಿಪಾಜಿಟ್ ತೆಗೆದುಕೊಳ್ಳುವುದನ್ನು ತಾತ್ಕಾಲಿಕವಾಗಿ ನಿಲ್ಲಿಸಿಬಿಡಿಯೆಂದು ಹೇಳಿರುವುದು ನಿಜ.

ಶ್ರೀ ಸುಬ್ಬರಾಯಶೆಟ್ಟರು (ಕೋರಾರ ಜಿಲ್ಲೆ).—ಈಗ ಅನೇಕ ಕಡೆ ನೀವು ಸ್ಥಾಪಿಸಿರುವ ಹೊಸ ಮಾದರಿಯ ಮಿಡ್ಲ್ ಸ್ಕೂಲುಗಳಲ್ಲಿ ಸಾಕಾದಷ್ಟು ಉಪಾಧ್ಯಾಯರುಗಳಿಲ್ಲದಿರುವುದು ತಮ್ಮ ಗಮನಕ್ಕೆ ಬಂದಿದೆಯೇ?

ಮಾನ್ಯ ಶ್ರೀ ಕೆ. ಚೆಂಗಲರಾಯರೆಡ್ಡಿಯವರು.—ಇಲ್ಲ.

ಶ್ರೀ ಸುಬ್ಬರಾಯಶೆಟ್ಟರು.—ಈ ಹೊಸ ಮಾದರಿ ಮಿಡ್ಲ್ ಸ್ಕೂಲುಗಳಲ್ಲಿ ಸಾಕಾದಷ್ಟು ಉಪಾಧ್ಯಾಯರಿಲ್ಲವೆ ಹುಡುಗರು ಬಹಳವಾಗಿ ಫೇಲಾಗುತ್ತಿರುವುದು ನಿಜವೇ!

ಮಾನ್ಯ ಶ್ರೀ ಕೆ. ಚೆಂಗಲರಾಯರೆಡ್ಡಿಯವರು.—ಅಂಥ ನಿದರ್ಶನಗಳು ನಮ್ಮ ಗಮನಕ್ಕೆ ಬಂದಿಲ್ಲ.

ಶ್ರೀ ಸುಬ್ಬರಾಯಶೆಟ್ಟರು.—ಇವುಗಳಲ್ಲಿ ಕಟ್ಟಡಗಳನ್ನು ಕಟ್ಟಿಸಿಕೊಡದಿರುವುವುಗಳೆಷ್ಟು?

ಮಾನ್ಯ ಶ್ರೀ ಕೆ. ಚೆಂಗಲರಾಯರೆಡ್ಡಿಯವರು.—ನೋಟೀಸ್ ಬೇಕು.

ಶ್ರೀ ಸುಬ್ಬರಾಯಶೆಟ್ಟರು.—ಸರ್ಕಾರದವರು ಈ ಸ್ಕೂಲಿನ ಬಗ್ಗೆ ಕಂಟ್ರಿಬ್ಯೂಷ್ ಬೇಕೆಂದು ಕೇಳಿದ್ದರ ಮೇರೆ ಧರ್ಮಾತ್ಮರುಗಳಿಂದ (Donors) ಎಷ್ಟು ಕಂಟ್ರಿಬ್ಯೂಷ್ ವಸೂಲಾಗಿದೆ?

ಮಾನ್ಯ ಶ್ರೀ ಕೆ. ಚೆಂಗಲರಾಯರೆಡ್ಡಿಯವರು.—ನೋಟೀಸ್ ಬೇಕು.

ಶ್ರೀ ಸುಬ್ಬರಾಯಶೆಟ್ಟರು.—ಸರ್ಕಾರದವರು ಇಷ್ಟು ಕಂಟ್ರಿಬ್ಯೂಷ್ ಕೊಡಬೇಕೆಂದು ಕೇಳಿ; ಅದರಂತೆ ಅವರು ಕೇಳಿದಷ್ಟು ಕೊಟ್ಟಮೇಲೂ ಕಟ್ಟಡ ಇನ್ನೂ ಕಟ್ಟಿಸಿಕೊಡದಿರುವುದು ಅನೇಕವಾಗಿಲ್ಲವೇ!

ಮಾನ್ಯ ಶ್ರೀ ಕೆ. ಚೆಂಗಲರಾಯರೆಡ್ಡಿಯವರು.—ಅನೇಕವಾಗಿರುವುದು ನನ್ನ ಗಮನಕ್ಕೆ ಬಂದಿಲ್ಲ.

ಶ್ರೀ ಸುಬ್ಬರಾಯಶೆಟ್ಟರು.—ಹಾಗಾದರೆ ಎಷ್ಟಿವೆಯೆಂದು ಹೇಳುತ್ತೀರಾ!

ಮಾನ್ಯ ಶ್ರೀ ಕೆ. ಚೆಂಗಲರಾಯರೆಡ್ಡಿಯವರು.—ನೋಟೀಸ್ ಬೇಕು.

ಶ್ರೀ ಸುಬ್ಬರಾಯಶೆಟ್ಟರು.—ಇನ್ನಾದರೂ ಸರ್ಕಾರದವರು ಜಾಗ್ರತೆ ಈ ಕಟ್ಟಡಗಳನ್ನು ಕಟ್ಟಿಸುವುದಕ್ಕೆ ಪ್ರಯತ್ನ ಮಾಡುತ್ತೀರಾ?

ಮಾನ್ಯ ಶ್ರೀ ಕೆ. ಚೆಂಗಲರಾಯರೆಡ್ಡಿಯವರು.—ಎಷ್ಟು ಮಾಡುವುದಕ್ಕೆ ಸಾಧ್ಯವಾಗುತ್ತದೋ ಅಷ್ಟನ್ನೂ ಶ್ರದ್ಧೆಯಿಂದ ಮಾಡುತ್ತೇವೆಂದು ಹೇಳುತ್ತೇನೆ.

ಶ್ರೀ ಸುಬ್ಬರಾಯಶೆಟ್ಟರು.—ಸರ್ಕಾರದವರು ಕಟ್ಟಡಕ್ಕೆ ಕಂಟ್ರಿಬ್ಯೂಷ್ ಕೊಡಬೇಕೆಂದು ಕೇಳಿದುದರ ಮೇರೆ ನಾವು ಅನೇಕ ಜನರಿಂದ ಇದಕ್ಕಾಗಿ ಧರ್ಮ ಕೇಳಿ ಹಣ ಸೇರಿಸಿ ತಮಗೆ ಕೊಟ್ಟಮೇಲೂ ತಾವು ಅದರಂತೆ ಕಟ್ಟಡ ಕಟ್ಟಿಸಿಕೊಡದೆ ಇರುವುದರಿಂದ ನಾವು ಮತ್ತೆ ಯಾವುದಕ್ಕೂ ಜನರನ್ನು ಡೊನೇಷ್ ಕೊಡಿಯೆಂದು ಕೇಳುವುದೇ ಕಷ್ಟವಾಗಿದೆಯೆಂಬುದು ತಮ್ಮ ಗಮನಕ್ಕೆ ಬಂದಿದೆಯೇ!

ಮಾನ್ಯ ಶ್ರೀ ಕೆ. ಚೆಂಗಲರಾಯರೆಡ್ಡಿಯವರು.—ಏನು ಮಾಡುವುದು! ನಾವೂ ಅನೇಕ ತೊಂದರೆಗಳ ಮಧ್ಯೆ ನಡೆಸಿಕೊಂಡು ಹೋಗಬೇಕಾಗಿದೆ.

ಶ್ರೀ ಕಡಿದಾಳ್ ಮಂಜಪ್ಪನವರು (ಶಿವಮೊಗ್ಗ ಜಿಲ್ಲೆ).—ಹಾಲಿ ವಿಶ್ವವಿದ್ಯಾನಿಲಯಕ್ಕೆ ಖರ್ಚು ಮಾಡುತ್ತಿರುವ ಹಣವನ್ನು ಖೋತಾ ಮಾಡಿ ಮಾಧ್ಯಮಿಕ ಶಾಲೆಗಳನ್ನು ಕಟ್ಟಿಸಿಕೊಡುವುದು ಸರ್ಕಾರದವರ ಯೋಚನೆಯಲ್ಲಿದೆಯೇ!

ಮಾನ್ಯ ಶ್ರೀ ಕೆ. ಚೆಂಗಲರಾಯರೆಡ್ಡಿಯವರು.—ಸದ್ಯಕ್ಕಿಲ್ಲ.

ಶ್ರೀ ಎಲ್. ಎಚ್. ತಿಮ್ಮಾಬೋಯಿಯವರು (ಚಿಕ್ಕಮಗಳೂರು ಜಿಲ್ಲೆ—ನಿಮ್ಮ ಪಂಗಡ).—ಹೊಸ ಮಾದರಿಯ ಮಿಡ್ಲ್ ಸ್ಕೂಲುಗಳು 582 ಏರ್ಪಾಡಾಗಿವೆಯೆಂದು ಇಲ್ಲಿ ಹೇಳಿರುವುದರಲ್ಲಿ ಹೆಣ್ಣುಮಕ್ಕಳ ಮಿಡ್ಲ್ ಸ್ಕೂಲುಗಳೇನಾದರೂ ಇವೆಯೇ!

ಮಾನ್ಯ ಶ್ರೀ ಕೆ. ಚೆಂಗಲರಾಯರೆಡ್ಡಿಯವರು.—ಬಹುಶಃ ಇರಲಾರದು.

ಶ್ರೀ ಎಲ್. ಎಚ್. ತಿಮ್ಮಾಬೋಯಿಯವರು.—ಗೊತ್ತಿಲ್ಲವೆಂದು ಅರ್ಥವೇ?

ಮಾನ್ಯ ಶ್ರೀ ಕೆ. ಚೆಂಗಲರಾಯರೆಡ್ಡಿಯವರು.—ಹಾಗೆ ಭಾವಿಸಿಕೊಳ್ಳಬಹುದು.

ಶ್ರೀ ಟಿ. ಮಾದಯ್ಯಗೌಡರು (ಬೆಂಗಳೂರು ಜಿಲ್ಲೆ).—1949-50, 1950-51ನೆಯ ಸಾಲುಗಳಲ್ಲಿ ಎಷ್ಟು ಪಕ್ಕಾ ಮಿಡ್ಲ್ ಸ್ಕೂಲುಗಳನ್ನು ಏರ್ಪಡಿಸಬೇಕೆಂದು ತಾವು ಬಡ್ಜೆಟ್ ಮಾಡಿದ್ದಿರಿ!

ಮಾನ್ಯ ಶ್ರೀ ಕೆ. ಚೆಂಗಲರಾಯರೆಡ್ಡಿಯವರು.—ನೋಟೀಸ್ ಬೇಕು.

ಶ್ರೀ ಟಿ. ಮಾದಯ್ಯಗೌಡರು.—ತಾವು ಬಡ್ಜೆಟ್ ಮಾಡಿದ ಸಂಖ್ಯೆಯ ಪೈಕಿ ಶೇಕಡ ಎಷ್ಟಾಯಿತೆಂದೇನಾದರೂ ತಿಳಿಯೋಣವಾಯಿತೇ!

ಮಾನ್ಯ ಶ್ರೀ ಕೆ. ಚೆಂಗಲರಾಯರೆಡ್ಡಿಯವರು.—ನೋಟೀಸ್ ಬೇಕು.

ಶ್ರೀ ಟಿ. ಮಾದಯ್ಯಗೌಡರು.—ನೀವಿಲ್ಲಿ ಕೊಟ್ಟಿರುವ ಉತ್ತರದಲ್ಲಿ 1949-50ರಲ್ಲಿ ಒಂದು ಸ್ಕೂಲನ್ನೂ, 1950-51ರಲ್ಲಿ ಒಂದು ಸ್ಕೂಲನ್ನೂ ಸ್ಥಾಪಿಸಲಾಗಿದೆಯೆಂದು ಹೇಳಿದ್ದೀರಿ. ನೀವು ಈ ಸಾರಿ ಸುಮಾರು 50 ಸ್ಕೂಲುಗಳನ್ನು ಕಟ್ಟಿಸಬೇಕೆಂದು ಬಡ್ಜೆಟ್ ಮಾಡಿರಲಿಲ್ಲವೇ!

Mr. SPEAKER.—Question No. 197.

Beds and Nursing Staff attached to several Hospitals.

*Q.—197. Sri V. M. MASCARENHAS (Retroceded Area—General),—

Will the Government be pleased to state:—

(a) the number of beds attached to (i) the Victoria, (ii) the Bowring and Lady Curzon, (iii) the Vani Vilas, and (iv) the Krishnarajendra Hospitals;

(b) the nursing staff attached to each?